**ಚಾಸಾಃ 36  ಪ್ರಾಸಾಃ 27**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**<u>ಸಿ.ಸಿ ಸಂಖ್ಯೆ: 1/2022</u>**

| | |
|---|---|
| ಹೆಸರು | :ಡಾ. ಶಶಿಕುಮಾರ್ |
| ತಂದೆಯ ಹೆಸರು | :ಶ್ರೀನಿವಾಸ್ ರೆಡ್ಡಿ ಎನ್ |
| ಪ್ರಾಯ | :66 ವರ್ಷ |
| ಉದ್ಯೋಗ | :ನಿವೃತ್ತ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ. |
| ವಾಸ | : ಬೆಂಗಳೂರು |

**<u>ದಿನಾಂಕ 18.12.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ</u>**

ನಾನು 12.8.2005 ರಿಂದ 5.6.2006 ರವರೆಗೆ ಸುಳ್ಯ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಮ್ಮ ಇಲಾಖೆಯಿಂದ ಇಂದಿರಾ ಆವಾಜ್ ಯೋಜನೆ ಮತ್ತು ಆಶ್ರಯ ಯೋಜನೆಯಡಿಯಲ್ಲಿ ನೀಡುವ ಸಹಾಯಧನದ ಕುರಿತು ಫಲಾನುಭವಿಗಳನ್ನು ಗ್ರಾಮ ಪಂಚಾಯತ್ ನಿಂದ ಆಯ್ಕೆ ಮಾಡಿ ಅದನ್ನು ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಗೆ ಕಳುಹಿಸಿ, ನಂತರ ಅದನ್ನು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಮೂಲಕ ಫಲಾನುಭವಿಗಳ ಪಟ್ಟಿಯ ಅನುಮತಿ ಪಡೆದುಕೊಂಡು, ಫಲಾನುಭವಿಗಳಿಗೆ ನೀಡಬೇಕಾದ ಸಹಾಯಧನವನ್ನು ಆಯಾ ಗ್ರಾಮ ಪಂಚಾಯತ್

ಗಳ ಇಂದಿರಾ ಆವಾಜ್ ಯೋಜನೆ ಖಾತೆಗೆ ಜಮಾ ಮಾಡಲಾಗುತ್ತದೆ. ಮಂಜೂರಾತಿ ಪಡೆದ ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡುವ ಸಮಯದಲ್ಲಿ ವಿವಿಧ ಹಂತಗಳಲ್ಲಿ ಸಹಾಯಧನವನ್ನು ಕ್ರಾಸ್ಡ್ ಚೆಕ್ ಗಳ ಮೂಲಕ ಫಲಾನುಭವಿಗಳಿಗೆ ನೀಡಲಾಗುತ್ತದೆ. ಫಲಾನುಭವಿಗಳು ಸಹಾಯಧನವನ್ನು ಪಡೆದುಕೊಂಡ ಬಗ್ಗೆ ಖಾತರಿ ಪಡಿಸಿಕೊಂಡು ಮುಂದಿನ ಹಂತದ ಕೆಲಸವನ್ನು ನಿರ್ವಹಿಸುತ್ತಾರೆ. ಫಲಾನುಭವಿಗಳಿಗೆ ಸಹಾಯಧನವನ್ನು ಚೆಕ್ ಮೂಲಕ ನೀಡಲು ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ತಮ್ಮ ಜಂಟಿ ಸಹಿಗಳ ಮೂಲಕ ನೀಡಲು ಅಧಿಕಾರ ಹೊಂದಿರುತ್ತಾರೆ.

2005-06 ಸಾಲಿನಲ್ಲಿ ಅಂದರೆ ದಿ. 1.3.2005 ರಿಂದ 26.9.2007 ರವರೆಗೆ ಮರ್ಕಂಜ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಶ್ರೀಮತಿ ಚಂದ್ರಕಲರವರು ಕಾರ್ಯ ನಿರ್ವಹಿಸಿರುತ್ತಾರೆ. ನಂತರ 27.9.2007 ರಿಂದ 31.3.2009 ರವರೆಗೆ ಶಿವರಾಮಗೌಡರು ಮರ್ಕಂಜ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅದೇ ಸಮಯದಲ್ಲಿ ಅಂದರೆ 1.4.2005 ರಿಂದ 2010ರವರೆಗೆ ಪ್ರೇಮ್ ಸಿಂಗ್ ನಾಯ್ಕ್ ರವರು ಮರ್ಕಂಜ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕೇಶವ ಗೌಡರವರು ಸದರಿ ಮರ್ಕಂಜ ಗ್ರಾಮ ಪಂಚಾಯತ್ ನಲ್ಲಿ ಸದರಿ ಸಮಯದಲ್ಲಿ ಗುಮಾಸ್ತ ಮತ್ತು ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಪ್ರತೀ ವರ್ಷ ಗ್ರಾಮ ಪಂಚಾಯತ್ ಗಳಲ್ಲಿ ನಡೆಯುವ ಜಮಾಬಂದಿ ಕಾರ್ಯಕ್ಕೆ ನೋಡಲ್ ಆಫೀಸರ್ ಗಳನ್ನು ನೇಮಕ ಮಾಡುತಿತ್ತದ್ದು, 2005-06ನೇ ಸಾಲಿನಲ್ಲಿ ಮರ್ಕಂಜ ಗ್ರಾಮ ಪಂಚಾಯತ್ ನ ಜಮಾಬಂದಿ ಕಾರ್ಯಕ್ಕೆ ಸುಳ್ಯ ತಾಲೂಕು ಸಿ.ಡಿ.ಪಿ.ಒ ರವರಾದ ಬೈಳಪ್ಪ ರವರನ್ನು ನೇಮಕ ಮಾಡಲಾಗಿತ್ತು. ಸದರಿಯವರು ನೀಡಿದ ಜಮಾಬಂದಿ ವರದಿಯಲ್ಲಿ ಯಾವುದೇ ವ್ಯತ್ಯಾಸಗಳು ಇರುವುದಿಲ್ಲ ಎಂದು

ತಿಳಿಸಿರುತ್ತಾರೆ. ಆದರೆ ಜಿಲ್ಲಾ ಪಂಚಾಯತ್ ವತಿಯಿಂದ ಮರ್ಕಂಜ ಗ್ರಾಮ ಪಂಚಾಯತ್ ನ ಲೆಕ್ಕಪರಿಶೋಧನೆ ನಡೆಸಿದಾಗ 2005-06, 2006-07 ಮತ್ತು 2007-08 ನೇ ಸಾಲಿನ ಇಂದಿರಾ ಆವಾಜ್ ಯೋಜನೆ ಮತ್ತು ಆಶ್ರಯ ಯೋಜನೆ ಗಳ ಫಲಾನುಭವಿಗಳಿಗೆ ಸಹಾಯಧನವನ್ನು ಕ್ರಾಸ್ಡ್ ಚೆಕ್ ಮೂಲಕ ನೀಡಿರುವುದಿಲ್ಲ. 2005-06ನೇ ಸಾಲಿನಲ್ಲಿ ಸುಮಾರು ರೂ.2,95,000/- ಗಳನ್ನು 2006-07 ರಲ್ಲಿ ರೂ.4,25,000/- ಮತ್ತು 2007-08 ರಲ್ಲಿ ರೂ.9,65,000/- ಗಳನ್ನು ಕ್ರಾಸ್ಡ್ ಚೆಕ್ ಮೂಲಕ ನೀಡದೇ ಇರುವುದು ತಿಳಿದುಬಂದಿರುತ್ತದೆ. ಆರೋಪಿತರಾದ ಚಂದ್ರಕಲ, ಪ್ರೇಮ್ ಸಿಂಗ್ ನಾಯ್ಕು, ಕೇಶವ ಗೌಡ ಮತ್ತು ಶಿವರಾಮೇ ಗೌಡ ರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಈಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ಪೊಲೀಸರು ನನ್ನನ್ನು 29.12.2014 ರಂದು ವಿಚಾರಣೆ ಮಾಡಿರುತ್ತಾರೆ. ನಾನು ಕಾರ್ಯ ನಿರ್ವಹಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ನನಗೆ ಮರ್ಕಂಜ ಗ್ರಾಮ ಪಂಚಾಯತ್ ನಲ್ಲಿ ಅವ್ಯವಹಾರ ಆಗಿದ್ದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಪಂಚಾಯತ್ ರಾಜ್ ಕಾಯ್ದೆ ಕಲಂ 157 ರ ಪ್ರಕಾರ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಗ್ರಾಮ ಪಂಚಾಯತ್ ಗಳ ಲೆಕ್ಕ ಪತ್ರಗಳನ್ನು ಮತ್ತು ಎಲ್ಲಾ ಹಣದ ವ್ಯವಹಾರಗಳನ್ನು ನಿಗಾ ವಹಿಸುವ ಜವಾಬ್ದಾರಿ ಇದೆ ಎಂದರೆ ಸರಿ. ನಾನು ನನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿರುತ್ತೇನೆ. ಗ್ರಾಮ ಪಂಚಾಯತಿಯಲ್ಲಿ ನೀಡಲಾಗುವ ಧನ ಸಹಾಯ ಮತ್ತು ಹಣದ ವ್ಯವಹಾರಗಳ ಕುರಿತು ನಾನು ಮೇಲ್ವಿಚಾರಣೆ ಮಾಡಿರುತ್ತೇನೆ. ಇಂದಿರಾ ಆವಾಜ್ ಯೋಜನೆ ಖಾತೆ ಆಯಾ ಗ್ರಾಮ ಪಂಚಾಯತ್ ಹೆಸರಿನಲ್ಲಿರುತ್ತದೆ.

ಗ್ರಾಮ ಪಂಚಾಯತಿ ಹೆಸರಿನಲ್ಲಿರುವ ಖಾತೆಯ ಚೆಕ್ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಬಳಿ ಇರುತ್ತದೆ. ಗ್ರಾಮ ಪಂಚಾಯತಿಗಳ ಹೆಸರಿನಲ್ಲಿರುವ ಖಾತೆಯ ವ್ಯವಹಾರಗಳನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಜಂಟಿಯಾಗಿ ನಿರ್ವಹಿಸುವ ಕುರಿತು ಪಂಚಾಯತ್ ರಾಜ್ ಕಾಯ್ದೆಯಲ್ಲಿರುತ್ತದೆ. ಪಂಚಾಯತಿಯ ಸೀಲುಗಳು ಕಾರ್ಯದರ್ಶಿಯವರ ವಶದಲ್ಲಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಚೆಕ್‌ಗಳನ್ನು ಕಾರ್ಯದರ್ಶಿ ಅಥವಾ ಸಿಬ್ಬಂದಿಗಳು ಬರೆಯುತ್ತಾರೆ ಎಂದರೆ ಸರಿ. ಜಮಾಬಂದಿ ಎಂದರೆ ಪಂಚಾಯತ್ ಮಟ್ಟದಲ್ಲಿ ಲೆಕ್ಕ ಪರಿಶೋಧನೆ ಆಗಿರುತ್ತದೆ. ಜಮಾಬಂದಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಿರಲಿಲ್ಲ ಎಂದರೆ ಸರಿ. ನೋಡಲ್ ಆಫೀಸರ್ ರವರು ನೀಡುವ ಜಮಾಬಂದಿಯನ್ನು ನಾನು ಪರಿಶೀಲಿಸಿ ಅದನ್ನು ಜಿಲ್ಲಾ ಪಂಚಾಯತ್ ಗೆ ಕಳುಹಿಸಬೇಕು ಎಂದರೆ ಸರಿ. 2005–06 ನೇ ಸಾಲಿನ ಮರ್ಕಂಜ ಗ್ರಾಮ ಪಂಚಾಯತಿಯ ಜಮಾ ಬಂದಿಯನ್ನು ನನ್ನ ಪರಿಶೀಲನೆಗೆ ನೀಡಿರುವುದಿಲ್ಲ, ಕಾರಣ ನಾನು ಜೂನ್ 2006ನೇ ಸಾಲಿನಲ್ಲಿ ವರ್ಗಾವಣೆ ಗೊಂಡಿರುತ್ತೇನೆ.

ಗ್ರಾಮ ಪಂಚಾಯತ್ ನಲ್ಲಿ ಹೊಸದಾಗಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಯವರು ನೇಮಕಗೊಂಡಾಗ ಪಂಚಾಯತಿ ಖಾತೆಯ ಚೆಕ್ ಗಳಿಗೆ ಸಹಿ ಮಾಡಲು ಅಧಿಕಾರ ಹೊಂದಿದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಹೆಸರುಗಳು ಬ್ಯಾಂಕ್ ಅಧಿಕಾರಿಗೆ ಕಳುಹಿಸಿಕೊಡಬೇಕು ಎಂದರೆ ಸರಿ. ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರಿಗೆ ಯಾವುದೇ ವಿದ್ಯಾರ್ಹತೆ ನಿಗದಿಗೊಳಿಸಿರುವುದಿಲ್ಲ ಎಂದರೆ ಸರಿ. ಕಾರ್ಯದರ್ಶಿಯವರು ಹೇಳಿದ್ದಕ್ಕೆ ಅಧ್ಯಕ್ಷರು ಸಹಿ ಮಾಡುತ್ತಾರೆ ಎಂದರೆ ಸರಿಯಲ್ಲ. ಅದು ಅಧ್ಯಕ್ಷರ ವಿವೇಚನೆಗೆ ಬಿಟ್ಟಿದ್ದು. ಮರ್ಕಂಜ ಗ್ರಾಮ ಪಂಚಾಯತ್ ನಲ್ಲಿ ಯಾರು ಅವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಸ್ವತಃ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು 2014 ರಲ್ಲಿ ಬೆಂಗಳೂರು ನಗರ ಪಶು ವೈದ್ಯ ಆಸ್ಪತ್ರೆಯ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಸುಳ್ಯ ಪೊಲೀಸ್ ಠಾಣೆಗೆ ಹಾಜರಾಗಿ

ನನ್ನ ಹೇಳಿಕೆ ನೀಡಿರುತ್ತೇನೆ. ನಾನು ಸುಳ್ಯ ಪೊಲೀಸ್ ಠಾಣೆಗೆ ಹೇಳಿಕೆ ನೀಡಲು ನಮ್ಮ ಇಲಾಖೆಯಿಂದ ಅನುಮತಿ ಪಡೆದು ಬಂದಿರುತ್ತೇನೆ. ನಾನು ದಿ. 29.12.2014 ರಂದು ಸುಳ್ಯ ಪೊಲೀಸ್ ಠಾಣೆಗೆ ಹೇಳಿಕೆ ನೀಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿಯಲ್ಲ. ಪೊಲೀಸರು ಸೃಷ್ಟಿ ಮಾಡಿದ ಹೇಳಿಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಗಳು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ